ಬೆಂಗಳೂರು ಮತ್ತು ಮೈಸೂರು ಹೆದ್ದಾರಿಯನ್ನು ಎಕ್ಸ್‌ಪ್ರೆಸ್ ಆಗಿ ಪರಿವರ್ತನೆ.

217 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೈಸೂರು ಹೆದ್ದಾರಿಯನ್ನು "ಎಕ್ಸ್‌ಪ್ರೆಸ್ ವೇ" ಆಗಿ ಪರಿವರ್ತಿಸುವ ಆಲೋಚನೆ ಸರ್ಕಾರಕ್ಕಿದೆಯೇ?

ಆ) ಈ ಹಿನ್ನೆಲೆಯಲ್ಲಿ ಪೂರ್ವಬಾವಿ ಸಿದ್ಧತೆಗಳೇನಾದರೂ ನಡೆದಿದೆಯೇ?

ಇ) ಯೋಜನೆ ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಪ್ರತ್ಯೇಕವಾದ "ಎಕ್ಸ್‌ಪ್ರೆಸ್ ವೇ" ನಿರ್ಮಿಸುವ ಪ್ರಸ್ತಾಪವು ಸರ್ಕಾರದ ಮುಂದಿದೆ.

ಆ) ನಡೆದಿವೆ.

ಇ) ರಸ್ತೆಗೆ ಬೇಕಾಗುವ ಭೂಸ್ವಾಧೀನದ ನಂತರ ಪ್ರಾರಂಭಿಸುವ ಪ್ರಸ್ತಾಪವಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇದು ಅತ್ಯಂದ ಪ್ರಮುಖವಾದ ಪ್ರಶ್ನೆ ಇದು. ಬೆಂಗಳೂರು ಮೈಸೂರು ಹೆದ್ದಾರಿಗೆ ಎಕ್ಸ್‌ಪ್ರೆಸ್ ವೇ ನಿರ್ಮಿಸಿರುವ ಪ್ರಸ್ತಾಪ ಸರ್ಕಾರದ ಮುಂದಿದೆ. ರಸ್ತೆ ಬಗ್ಗೆ ಭೂಸ್ವಾಧೀನದ ಪ್ರಶ್ನೆ ಇದೆಯೆಂದು ಹೇಳಿದ್ದಾರೆ. ನಾನು ನೇರವಾಗಿ ಕೇಳುವಂಥಾದ್ದು ಭೂಸ್ವಾಧೀನದ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಈಗಾಗಲೇ ಪ್ರಾರಂಭ ಮಾಡಿದ್ದೀರ? ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ. ಅದಕ್ಕೆ ತಾವು ಬಜೆಟ್‌ನಲ್ಲಿ ಹಣವನ್ನು ಮೀಸಲಾಗಿಟ್ಟಿದ್ದೀರಾ? ದಯವಾಡಿ ಉತ್ತರ ಕೊಡಬೇಕು.

ಶ್ರೀ ಕೆ.ಎಚ್. ರಂಗನಾಥ್ : ಈ ರಸ್ತೆ ಕಾಮಗಾರಿಯದು ಒಂದು ನೀತಿಯ ಪ್ರಶ್ನೆ. ನೇರವಾಗಿರತಕ್ಕ ರಸ್ತೆಯಾಗಬೇಕು ಎನ್ನುವುದರಲ್ಲಿ ಭಿನ್ನಾಬಿಪ್ರಾಯವಿಲ್ಲ. ಸುಮಾರು 139 ಕಿಲೋಮೀಟರ್ ಇರತಕ್ಕ ಈ ರಸ್ತೆಯನ್ನು ಮಾಡಬೇಕೆಂದು ಹೇಳಿ ಒಂದು ತೀರ್ಮಾನವಾಗಿದೆ. ಅದಕ್ಕೆ ಕನ್‌ಸಲ್‌ಟೆನ್ಸಿಗೆ ಕೂಡ ಕೊಟ್ಟಿದ್ದಾರೆ. 1982ರಲ್ಲಿ ಈ ಒಂದು ಅಭಿಪ್ರಾಯಕ್ಕೆ ಬಂದು, ಮೆಸರ್ಸ್ ಇಂಟರ್ ಕಾಂಟಿನೆಂಟಲ್ ಅಂಡ್ ಟೆಕ್‌ನೋಕ್ರಾಪ್ಟ್ ಲಿಮಿಟೆಡ್‌ಗೆ ಕನ್‌ಸಲ್‌ಟೆನ್ಸಿ, ವಹಿಸಿ ಅದನ್ನು ಮಾಡಿಕೊಡಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ಸುಮಾರು 161 ಕೋಟಿ ರೂಪಾಯಿ ಆಗುತ್ತದೆ ಎಂದು ಅವರು ಪ್ರಸ್ತಾಪ ಮಾಡಿದ್ದಾರೆ. ಕನ್‌ಸಲ್‌ಟೆನ್ಸಿಗೆ 13.5 ಲಕ್ಷ ರೂಪಾಯಿಗಳನ್ನು ಕೂಡ ಕೊಟ್ಟಿದ್ದೇವೆ. ನಮ್ಮಲ್ಲಿ ಮಾಡಿಸಬಹುದಾಗಿತ್ತು. ನಮ್ಮಲ್ಲಿ ಇಂಜಿನಿಯರುಗಳು ಇಲ್ಲವೆಂದಲ್ಲ, ಆದರೆ ಕಾರಣಾಂತರಗಳಿಂದ ಅದು ನಡೆದು ಹೋಗಿದೆ. ಈಗ ಪ್ರಶ್ನೆ ಏನೆಂದರೆ ಟೆಂಡರ್ ಕೂಡ ಕರೆದು 10 ಜನರ ಟೆಂಡರ್ ಅರ್ಜಿ ತೆಗೆದುಕೊಂಡು ಅದರಲ್ಲಿ ಒಬ್ಬರಿಗೆ ಮೆಸರ್ಸ್ ಕೋಡೇಸ್ ಕಂಪನಿಯವರಿಗೆ ಗುತ್ತಿಗೆ ಕೊಟ್ಟಿದ್ದಾರೆ. 1987ರಲ್ಲಿ ಯೋಚನೆ ಮಾಡಿ ಪ್ರೈವೆಟೈಸೇಷನ್ ಸ್ಕೀಮ್‌ನಲ್ಲಿ ಕೊಟ್ಟು ಬಿಟ್ಟಿದ್ದಾರೆ. ಆಗ ಪ್ರೈವೇಟೈಸೇಷನ್ ಬಂದು ಬಿಟ್ಟಿತು. ಪಾಪ ಹಾಗೆ ಮಾಡಿದ್ದಾರೆ. ಸಂಚಾರಕ್ಕೆ ರಸ್ತೆಯನ್ನು ಬಳಸಿದ್ದಕ್ಕೆ ಅವರ ಕಡೆಯಿಂದ ಸುಂಕ ವಸೂಲು ಮಾಡಿಕೊಳ್ಳುವುದು ಅಂತ ಕೂಡ ಆಗಿದೆ. ಹಾಗಾಗಿ ಬಜೆಟ್‌ನಲ್ಲಿ ಕೇವಲ 5 ಲಕ್ಷ ರೂಪಾಯಿಗಳನ್ನು ಲ್ಯಾಂಡ್ ಅಕ್ವಿಸೇಷನ್‌ಗೆಂದು

ಇಟ್ಟಿದ್ದಾರೆ. ಮತ್ತೆ ಗುತ್ತಿಗೆ ಕರಾರು ಪರಿಶೀಲನೆ ಮಾಡುವುದಕ್ಕೆ ಒಂದು ಸಮಿತಿಯನ್ನು ಕೂಡ ನೇಮಕ ಮಾಡಿದ್ದಾರೆ. ಪ್ರಶ್ನೆ ಏನೆಂದರೆ ಸುಂಕ ವಸೂಲಿ ಮಾಡಿ, ಪ್ರೈವೇಟ್‌ನವರಿಗೆ ಈ ರಸ್ತೆ ಕೊಡತಕ್ಕದ್ದು ಎಂದು ಮಾತನಾಡುವುದು ಸುಲಭ. ಇದು ಗುಜರಾತ್‌ನಲ್ಲಿದೆ ಎಂದು ಹೇಳಿದ್ದಾರೆ. ಆದರೆ ಇದನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ಮತ್ತು ಈ ಸಭೆಯು ಕೂಡ ಪುನರ್‌ಪರಿಶೀಲನೆ ಮಾಡತಕ್ಕ ಪರಿಸ್ಥಿತಿ ಬರುತ್ತದೆ. ಬರೀ ನಮ್ಮ ಮನಸ್ಸಿಗೆ ಬಂದಾಗ ತೀರ್ಮಾನ ತೆಗೆದುಕೊಳ್ಳುವುದಿಲ್ಲ, ಈ ಸಭೆಯ ಮುಖಾಂತರ ರಾಜ್ಯದ ಜನತೆಯ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗುತ್ತದೆ. ಆ ದೃಷ್ಟಿಯಿಂದ ಇವೊತ್ತಿನ ವಸ್ತು ಸ್ಥಿತಿ ಏನೆಂದು ತಮ್ಮ ಮುಂದೆ ಇಟ್ಟಿದ್ದೇನೆ. ಮತ್ತೆ ಸರ್ಕಾರ ಪರಿಶೀಲನೆ ಮಾಡಿ, ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿ, ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ತಕ್ಷಣ ನಾವು ಭೂಸ್ವಾಧೀನ ಮಾಡುವುದಕ್ಕೆ ಪ್ರಾರಂಭ ಮಾಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದೇ ಒಂದು ನೇರವಾದ ಪ್ರಶ್ನೆ. ಈಗಾಗಲೇ ತಾವು ಏನು ಹೇಳಿದ್ದೀರಿ, ಬಡ ಬೋರೆಗೌಡ ಕೊಟ್ಟಂಥ ತೆರಿಗೆ ಹಣದಿಂದ 13.5 ಲಕ್ಷ ರೂಪಾಯಿಗಳನ್ನು ಕನ್‌ಸಲ್‌ಟೆನ್ಸಿಗೋಸ್ಕರ ಖರ್ಚು ಮಾಡಿದ್ದೀರಿ. ಒಂದು ರೀತಿ ಇದನ್ನು ಮಾಡಬೇಕೆ ಬೇಡವೇ ಎನ್ನುವ ನಿರ್ಧಾರಕ್ಕೆ ಬರುವುದಕ್ಕೆ ಮುಂಚೆಯೇ ಒಂದು ರೀತಿ "ಕೂಸು ಹುಟ್ಟುವುದಕ್ಕೆ ಮುಂಚೆ ಕುಲಾವಿ ಹೊಲಿಸಿದ ಹಾಗೆ" 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನಾನು ನೇರವಾಗಿ ನಿಮ್ಮನ್ನು ಕೇಳುತ್ತೇನೆ ಇದರ ಅಗತ್ಯ ಇದೆ ಅಂದರೆ ಮಾಡಿ, ಇಲ್ಲವೆಂದರೆ 13 ಲಕ್ಷ ರೂಪಾಯಿಗಳನ್ನು ಇವರ ಹೆಸರಿನಲ್ಲಿ ತೆಗೆದುಕೊಂಡು ಇಲ್ಲಿ ಯಾರೋ ತಿಂದಿದ್ದರೆ ಅದರ ಬಗ್ಗೆ ರೆಕಾರ್ಡ್ ತೆಗೆದು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡಿ. ನುಂಗಿ ಹಾಕುವ ಪ್ರಶ್ನೆ ಬಂದಾಗ ಆ ದೇವರು ಸಹ ಈ ಕಡೆ ಗಮನ ಕೊಡುತ್ತಾನೆ. ತುಂಬಾ ಸಂತೋಷ, ತಮ್ಮ ಉತ್ತರದಲ್ಲಿ ಅನೇಕ ಗೌಪ್ಯ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ ಸತ್ಯ ಸಂಗತಿಗಳನ್ನು ಹೇಳಿದ್ದೀರಿ. ಆದರೆ ಇದರಲ್ಲಿ 13 ಲಕ್ಷ ರೂಪಾಯಿಗಳನ್ನು ತಿಂದು ಹಾಕಿದ್ದಾರೆ.

ಉಪಾಧ್ಯಕ್ಷರು : ನೇರವಾದ ಪ್ರಶ್ನೆ ಹಾಕಿ.

ಶ್ರೀ ಕೆ.ಎಚ್. ರಂಗನಾಥ್ : ಕನ್‌ಸಲ್‌ಟೆನ್ಸಿಯನ್ನು ಬಟ್ಟೆ ಮಾಡುತ್ತಾರೆಯೇ? ಅವರು ಪೀಸ್ ಕೇಳಿದ್ದಾರೆ ; ಇವರು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವೇ ನಿರ್ಮಾಣ ಮಾಡುವುದಕ್ಕೆ ಕನ್‌ಸಲ್‌ಟೆನ್ಸಿಗಾಗಿ 13 ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದಾರೆಂದರೆ ನಮ್ಮಲ್ಲಿ ಎಕ್ಸ್‌ಪರ್ಟ್ಸ್ ಇರಲಿಲ್ಲವೇ? ಇದನ್ನು ತಾವು ಮಾಡುವ ಹಾಗಿದ್ದರೆ, ಮುಂದುವರೆಸಿ, ಇಲ್ಲದಿದ್ದರೆ ತಮ್ಮ ಕಾಲದಲ್ಲಿ ಕನ್‌ಸಲಟೆನ್ಸಿಗಾಗಿ ಹತ್ತು ಹನ್ನೆರಡು ಲಕ್ಷ ರೂಪಾಯಿ ಖರ್ಚು ಆಗುವುದು ಬೇಡ. ಇದನ್ನು ತಾವು ಮಾಡುತ್ತೀರೋ ಇಲ್ಲವೋ? ಇದರ ಬಗೆ ಕಾ.ಬಿನೆಟ್‌ನಲಿ ಯಾವಾಗ ಚರ್ಚೆ ಮಾಡುತ್ತೀರಿ?

ಶ್ರೀ ಕೆ.ಹೆಚ್. ರಂಗನಾಥ್ : ಅದನ್ನೇ ನಾನು ಹೇಳಿದ್ದು. ಇದೊಂದು ನೀತಿ ಪ್ರಶ್ನೆ. ಈ ಸಭೆ ಸದನ ಒಪ್ಪಬೇಕಾಗುತ್ತದೆ. ಅದಕ್ಕೆ ಪೂರ್ವಬಾವಿಗಾಗಿ ಸರ್ಕಾರ ಪುನರ್ ಪರಿಶೀಲನೆಮಾಡುತ್ತದೆ. ಇದನ್ನು ನಾನು ಕ್ಯಾಬಿನೆಟ್ ಗಮನಕ್ಕೂ ತರುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಪ್ರಶ್ನೆ (264) ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುತ್ತದೆ.

ಉಪಾಧ್ಯಕ್ಷಿಣಿಯವರು : ಇದು ಬೇರೆ ಇಲಾಖೆಗೆ ವರ್ಗಾಯಿಸಲ್ಪಟ್ಟಿದೆ. ಮುಂದೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಜೆ. ಜಾರ್ಜ್ : ಕಾರ್ಪೊರೇಷನ್ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆಗಳನ್ನು ಲೋಕೋಪಯೋಗಿ ಇಲಾಖೆಯವರು ಮೇಂಟೇನ್ ಮಾಡುತ್ತಾರೆ. ಆದ್ದರಿಂದ ಈ ಶಾಲಾ ಕಟ್ಟಡ ಸದರಿ ಇಲಾಖೆಗೆ ಬರುತ್ತದೆ. ಆದರೆ, ಲೋಕೋಪಯೋಗಿ ಇಲಾಖೆಗೆ ಬರುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದು ಬರುತ್ತದೆಂದು ನಾನು ಹೇಳುತ್ತಿದ್ದೇನೆ.

ಉಪಧ್ಯಕ್ಷಿಣಿಯವರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಪಂಚನಹಳ್ಳಿ-ಸಿರಾ ರಸ್ತೆ

107-ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಪಂಚನಹಳ್ಳಿ-ಸಿರಾ ರಸ್ತೆ ರಾಜ್ಯ ಹೆದ್ದಾರಿಗೆ ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ರಸ್ತೆ ಹೆದ್ದಾರಿಯ ಲಕ್ಷಣಗಳೇನು?*

ಇ) *ಆ ರಸ್ತೆಗೆ ಡಾಂಬರ್ ಹಾಕಿಸಿ ಇಲ್ಲಿನ ಜನರಿಗೆ ಆಗುವ ಆನಾನುಕೂಲಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ರಾಜ್ಯ ಹೆದ್ದಾರಿಯು ಜಿಲ್ಲಾ ಕೇಂದ್ರಗಳನ್ನು ಸಂಪರ್ಕಿಸುವ ರಸ್ತೆಯಾಗಿದ್ದು ಕನಿಷ್ಟ 3.75 ಮೀಟರ್ ಅಗಲಕ್ಕೆ ಡಾಂಬರು ಮೇಲ್ಮೈಯನ್ನು ಹೊಂದಿರಬೇಕು ಹಾಗೂ ದ್ವಿಪಥ ಸಂಚಾರಕ್ಕೆ ಅನುಕೂಲವಿರಬೇಕು.

ಇ) ಈ ರಸ್ತೆಯ ಬಾಗವು 30 ಕಿಮೀ. ಉದ್ದವಿದ್ದು, 21.3 ಕಿಮೀ. ಉದ್ದಕ್ಕೆ ಡಾಂಬರಿನ ರಸ್ತೆಯಾಗಿದೆ. ಇನ್ನುಳಿದ 16.7 ಕಿಮೀ. ಉದ್ದದ ಜಲ್ಲಿ ರಸ್ತೆಯ ಪೈಕಿ 5 ಕಿಮೀ ಉದ್ದದ ರಸ್ತೆಯನ್ನು 1992-3ನೇ ಸಾಲಿನಲ್ಲಿ ಸುಮಾರು 5.00 ಲಕ್ಷ ರೂ.ಗಳ ಅಂದಾಜಿನಲ್ಲಿ ಡಾಂಬರೀಕರಣ ಮಾಡುವ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ. ಉಳಿದ ಬಾಗದ ಜಲ್ಲಿ ರಸ್ತೆಯನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತಹಂತವಾಗಿ ಡಾಂಬರೀಕರಿಸಲಾಗುವುದು.